# IN THE COURT OF THE ADDL. SENIOR CIVIL JUDGE & JMFC., GUBBI

# OS – **65/2016**

Witness present and duly sworn on : 21.09.2024

Further cross Examination: by Counsel for Plaintiff :

ನಿಡಿ-4 ರ ಸಮಯದಲ್ಲಿ ಸಿದ್ದಲಿಂಗಯ್ಯನವರ ಮೂಲಪತ್ರವನ್ನು ಪಡೆದಿರುವುದಿಲ್ಲ. ನಿಡಿ-4 ದಾಖಲೆಯಲ್ಲಿ ತಿದ್ದುಪಡಿಗಳು ಆಗಿದ್ದು, ಅದಕ್ಕೆ ಯಾವುದೇ ಸಹಿ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ತಿದ್ದುಪಡಿಗಳು ಆಗಿರುವ ಸಂದರ್ಭದಲ್ಲಿ ಅದರ ಬಗ್ಗೆ ಕ್ರಯಪತ್ರದ ಕೊನೆಯ ಭಾಗದಲ್ಲಿ ನಮೂದು ಮಾಡುತ್ತಾರೆ ಹಾಗೂ ಅಂತಹ ನಮೂದು ನಿಡಿ-4 ರಲ್ಲಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ-4 ರ ಪುಟ ಸಂಖ್ಯೆ 4 ರ ಉತ್ತರದ ಕಡೆ ಇರುವುದನ್ನು ದಕ್ಷಿಣದ ಕಡೆ ಎಂದು ನಾನು ತಿದ್ದಿ ದ್ದೇನೆಂದರೆ ಸರಿಯಲ್ಲ. ಸದರಿ ತಿದ್ದುಪಡಿಗೆ ಯಾವುದೇ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. ನಿಡಿ-4 ಕ್ಕೆ ದೊಡ್ಡಯ್ಯನವರ ವಂಶಸ್ಥರು ಸಹಿ ಮಾಡಿರುವುದಿಲ್ಲ ಮತ್ತು ಸದರಿ ದಾಖಲೆಯನ್ನು ನಾನು ಸಿದ್ದಲಿಂಗಯ್ಯನವರೊಂದಿಗೆ ಶಾಮಿಲಾಗಿ ಸೃಷ್ಟಿಸಿದ್ದೇನೆಂದರೆ ಸರಿಯಲ್ಲ. ವಾದಿಯ ಕುಟುಂಬಕ್ಕೆ ಮೋಸ ಮಾಡಲು ದಾಖಲೆಯನ್ನು ಸೃಷ್ಟಿಸಿರುವ ಕಾರಣ ನನಗೆ ಸದರಿ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**Re examination - Nil**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi